# ಚಾಕೊಲೇಟ್ ಗುಡ್ಡಗಳು

## ನೋಡಬಹುದು, ತಿನ್ನಲಾಗದು!



ಫಿಲಿಪ್ಪೀನ್ಸ್ ದೇಶದ ಬೊಹೋಲ್‌ನಲ್ಲಿರುವ ಚಾಕೊಲೇಟ್ ಗುಡ್ಡಗಳು ಕಣ್ಣಿಗೆ ಆನಂದವನ್ನು ಕೊಟ್ಟರೆ, ಅವುಗಳ ಕುರಿತಾದ ಜಾನಪದ ಕಥೆಗಳು ಮನಸ್ಸಿಗೆ ಮುದ ಕೊಡುತ್ತವೆ. ನಿಸರ್ಗವೇ ಸೃಷ್ಟಿಸಿದ ಈ ಅಸಂಖ್ಯಾತ ಗುಡ್ಡಗಳ ಗುಂಪು ಜಗತ್ತಿನ ಪ್ರವಾಸಿಗರನ್ನೆಲ್ಲ ಆಕರ್ಷಿಸುತ್ತಿದೆ.

■ ಚೈತ್ರಿಕಾ ನಾಯ್ಕ ಹರ್ಗಿ

ಮಕ್ಕಳು ಆಟ ಆಡುವಾಗ ಮಣ್ಣಿನ ಗುಪ್ಪೆ, ಮರಳು ಗುಪ್ಪೆ ಹಾಕುವುದನ್ನು ನಾವೆಲ್ಲರೂ ನೋಡಿಯೇ ಇರುತ್ತೇವೆ. ಒಂದರ ಪಕ್ಕ ಇನ್ನೊಂದು ಪುಟ್ಟ ಪುಟ್ಟ ಗುಪ್ಪೆಗಳನ್ನು ಇಟ್ಟು ಆಡುವ ಅವರ ಸಂಭ್ರಮ ದೇವರಿಗೂ ಇಷ್ಟವೇನೋ. ಹಾಗಾಗಿಯೇ ಫಿಲಿಪ್ಪೀನ್ಸ್ ದೇಶದ ಬೊಹೋಲ್ ಎಂಬಲ್ಲಿ ಹೀಗೆಯೇ ಗುಡ್ಡಗಳನ್ನು ಇಟ್ಟು ಆಡುವ ಆಟ ಆಡಿರುವ ಹಾಗಿದೆ. ವೈಮಾನಿಕ ನೋಟದಲ್ಲಿ ಪುಟ್ಟ ಪುಟ್ಟ ಗುಪ್ಪೆಗಳ ಹಾಗೆಯೇ ಕಾಣುವ ಈ ಗುಡ್ಡಗಳೆಲ್ಲವೂ ಅಸಲಿಗೆ ಅಷ್ಟು ಸಣ್ಣವೇನಲ್ಲ.

ಮಕ್ಕಳಾಟಿಕೆಗಳ ಹಾಗೆ ಕಾಣುವ ಈ ಗುಡ್ಡಗಳಿಗೆ ಇರುವ ಹೆಸರೂ ಮಕ್ಕಳಿಗೆ ಇಷ್ಟವಾಗುವಂಥದ್ದೇ – ಚಾಕೊಲೇಟ್ ಗುಡ್ಡಗಳು!

ಬೇಸಿಗೆಯ ಬಿಸಿಲಿಗೆ ಬೋಳು ಗುಡ್ಡದ ಮೇಲಿರುವ ಹುಲ್ಲು ಕಂದು ಕಣ್ಣಕ್ಕೆ ತಿರುಗುವುದರಿಂದ ಇವುಗಳನ್ನು ಚಾಕೊಲೇಟ್ ಬೆಟ್ಟಗಳು ಎಂದು ಕರೆಯುತ್ತಾರೆ. ಚಾಕೊಲೇಟ್ ಪ್ರಿಯರು ಡೈರಿಮಿಲ್ಕ್‌ನ ಬಬ್ಲಿಗಳನ್ನು ಈ ಗುಡ್ಡಗಳಿಗೆ ಹೋಲಿಸಿಕೊಳ್ಳಬಹುದು. ಸುಣ್ಣದ ಕಲ್ಲಿನಿಂದಾದ ಗುಡ್ಡದಲ್ಲಿ ಮಳೆಗಾಲದಲ್ಲಿ ಹಚ್ಚ ಹಸಿರಿನ ಹುಲ್ಲು ಬೆಳೆದು ನಿಂತಿರುತ್ತದೆ.

ನಿಸರ್ಗದ ವೈಚಿತ್ರ್ಯಗಳು ಎನ್ನಬಹುದಾದ ರಾಶಿ ರಾಶಿ ಗುಡ್ಡಗಳು ಬೆನ್ನುಬ್ಬಿಸಿಕೊಂಡು ನಿಂತಿರುವುದನ್ನು ನೋಡಿದರೆ ವಿಸ್ಮಯ ಎನಿಸದೆ ಇರದು. ಕಣ್ಣು ಹಾಯಿಸಿದರೆ ಒಂದಲ್ಲ ಎರಡಲ್ಲ, ಬರೋಬ್ಬರಿ 1776 ಬೆಟ್ಟಗಳು ಗುಪ್ಪೆ ಗುಪ್ಪೆಯಾಗಿ ಹರಡಿಕೊಂಡಿವೆ. 30 ಮೀಟರ್‌ನಿಂದ ಹಿಡಿದು 120 ಮೀಟರ್ ಎತ್ತರದವರೆಗಿನ ಈ ಬೆಟ್ಟಗಳು ಇಲ್ಲಿ ಒಂದಕ್ಕೊಂದು ಸ್ಪರ್ಧಿಗಳಂತೆಯೂ ಸ್ನೇಹಿತರಂತೆಯೂ ಹೆಗಲಿಗೆ ಹೆಗಲು ಕೊಟ್ಟು ನಿಂತಿವೆ.

ಚಾಕೊಲೇಟ್ ಗುಡ್ಡಗಳನ್ನು 'ಫಿಲಿಪ್ಪೀನ್ಸ್ ದೇಶದ ನೈಸರ್ಗಿಕ ಪಾರಂಪರಿಕ ತಾಣ' ಎಂದು ಅಲ್ಲಿನ ಸರ್ಕಾರ ಘೋಷಿಸಿದೆ. ಹಾಗೆಯೇ ಅದು ದೇಶದ ಪ್ರಸಿದ್ಧ ಪ್ರವಾಸಿ ತಾಣವೂ ಹೌದು. ಹವಾಮಾನಕ್ಕೆ ಅನುಗುಣವಾಗಿ ಬಣ್ಣ ಬದಲಿಸುವುದು ಚಾಕೊಲೇಟ್ ಗುಡ್ಡಗಳ ವಿಶೇಷಗಳಲ್ಲಿ ಒಂದು. ಆ ಗುಣ ಪ್ರವಾಸಿಗರನ್ನು ತನ್ನತ್ತ ಸೆಳೆದುಕೊಳ್ಳುವ ಮುಖ್ಯ ಶಕ್ತಿಯೂ ಹೌದು. ಬೊಹೋಲ್‌ನ ಪ್ರಾದೇಶಿಕ ಬಾವುಟದಲ್ಲಿ ಚಾಕೊಲೇಟ್ ಬೆಟ್ಟಗಳನ್ನು ಸೇರಿಸಲಾಗಿದೆ. ಫಿಲಿಪ್ಪೀನ್ಸ್ ಸರ್ಕಾರ ಯುನೆಸ್ಕೊದ ಪಾರಂಪರಿಕ ತಾಣದಲ್ಲಿ ಈ ಬೆಟ್ಟಗಳನ್ನು ಸೇರಿಸುವಂತೆ ಪ್ರಸ್ತಾವನೆ ಸಲ್ಲಿಸಿದೆ.

ಗುಡ್ಡಗಳಷ್ಟೇ ಅಲ್ಲ, ಅವು ನಿಂತಿರುವ ಜಾಗವೂ ಅತ್ಯಾಕರ್ಷಕವಾಗಿದೆ. ಚಾಕೊಲೇಟ್ ಗುಡ್ಡಗಳಿರುವ ಬೊಹೋಲ್, ಸುತ್ತಲೂ ಸಮುದ್ರ ಆವರಿಸಿರುವ ಸುಂದರ ದ್ವೀಪ. ಹವಾಮಾನದ ಕಾರಣಕ್ಕಾಗಿ ಗಾಳಿಯಿಂದ ಮರಳಿನ ದಿನ್ನೆಗಳು ರೂಪುಗೊಂಡು ನಂತರ ಗುಡ್ಡಗಳಾಗಿವೆ ಎಂದು ಅಧ್ಯಯನಗಳು ಹೇಳುತ್ತವೆ.

### ನೂರು ಗುಡ್ಡಗಳಿಗೆ ಮೂರು ಕಥೆಗಳು!

ಅಲ್ಲಿನ ಜನಪದರಲ್ಲಿ ಗುಡ್ಡಗಳ ಹುಟ್ಟಿನ ಬಗ್ಗೆ ಹಲವು ಕಥೆಗಳಿವೆ. ಅವುಗಳಲ್ಲಿ ಮೂರು ದಂತಕಥೆಗಳಂತೂ ಗುಡ್ಡಗಳಷ್ಟೇ ಸ್ವಾರಸ್ಯಕರವಾಗಿವೆ.

ಮೊದಲನೇ ಕಥೆ ಹೀಗಿದೆ: ಹಿಂದೊಮ್ಮೆ ಇಬ್ಬರು ದೈತ್ಯಾಕಾರದ ಮನುಷ್ಯರಿಗೆ ಜಗಳವಾಯಿತಂತೆ. ದೈತ್ಯಾಕಾರದ ಮನುಷ್ಯರ ಜಗಳವೂ ರಾಕ್ಷಸೀಯವೇ ಆಗಿರಬೇಕಲ್ಲವೇ? ಜಗಳದಲ್ಲಿ ಗುದ್ದಾಟ ಮಾಡುತ್ತಾ ಕಲ್ಲು, ಮರಳನ್ನು ಹಿಡಿ ಹಿಡಿಯಾಗಿ ಒಬ್ಬರ ಮೇಲೊಬ್ಬರು ಎತ್ತಿ ಎಸೆಯುತ್ತಾ ಕಾದಾಡಿದರು. ಇದು ನಿಮಿಷ, ಗಂಟೆಗಳ ಹೊಡೆಪೆಟ್ಟಲ್ಲ, ಹಲವು ದಿನಗಳವರೆಗೆ ಮುಂದುವರಿಯಿತು. ಇಬ್ಬರೂ

